ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತೆರಡನೆಯ ಅಧಿವೇಶನ
ಬುಧವಾರ, ದಿನಾಂಕ: 09ನೇ ಡಿಸೆಂಬರ್, 2020

ರಾಜ್ಯದಲ್ಲಿ ಮುಜರಾಯಿ ವ್ಯಾಪ್ತಿಗೆ ಒಳಪಡುವ ದೇವಾಲಯಗಳ ಕುರಿತು

ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-

218 (261) ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಮುಜರಾಯಿ (ಧಾರ್ಮಿಕ ದತ್ತಿ) ವ್ಯಾಪ್ತಿಗೆ ಒಳಪಡುವ ಎಷ್ಟು ದೇವಾಲಯಗಳಿವೆ; ಇವುಗಳಲ್ಲಿ ಎ ದರ್ಜೆಯ ಬಿ ದರ್ಜೆ, ಸಿ ದರ್ಜೆ ದೇವಾಲಯಗಳು ಯಾವುವು;

(ಆ) ಇವುಗಳಲ್ಲಿ ಎ,ಬಿ,ಸಿ ದರ್ಜೆಗಳನ್ನು ಯಾವ ಮಾನದಂಡದಲ್ಲಿ ನಿರ್ಧರಿಸಲಾಗುವುದು (ವಿವರ ನೀಡುವುದು)

(ಇ) ಸದರಿ ದೇವಾಲಯಗಳ ಅರ್ಚಕರಿಗೆ ಸರ್ಕಾರದಿಂದ ಎಷ್ಟು ವೇತನ ಪಾವತಿಯಾಗುತ್ತಿದೆ ಪ್ರಸಕ್ತ ಸಾಲಿನಲ್ಲಿ ಪಾವತಿಯಾದ ವೇತನವೆಷ್ಟು;

(ಈ) ಪ್ರಸಕ್ತ ಸಾಲಿನಲ್ಲಿ ದೇವಾಲಯಗಳ ಜೀರ್ಣೋದ್ಧಾರ ಹಾಗೂ ಇತ್ಯಾದಿ ಕಾರ್ಯಕ್ರಮಗಳಿಗಾಗಿ ಮೀಸಲಿಟ್ಟ ಹಣವೆಷ್ಟು; ಹಾಗೂ ಖರ್ಚಾದ ಹಣ ಎಷ್ಟು ?